ದಿಃ 26-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಎನ್.ವಿ ವಾದಿ ಪರ ವಕೀಲರಿಂದಃ

ನನ್ನ ತಾತನ ಹೆಸರು ಗಿಡ್ಡಪ್ಪ. ನಾನು ಅವಿದ್ಯಾವಂತ. ನನ್ನ ತಾತನಿಗೆ ಚಿಕ್ಕನರಸಿಂಹಪ್ಪ ಮತ್ತು ದೊಡ್ಡ ನರಸಿಂಹಪ್ಪ ಎಂಬ ಇಬ್ಬರು ಮಕ್ಕಳಿದ್ದರು. ಸದರಿ ದೊಡ್ಡ ನರಸಿಂಹಪ್ಪರವರು ನನ್ನ ತಾತನ ಹಿರಿಯ ಮಗ ಎಂದರೆ ಸರಿ. ಸದರಿ ದೊಡ್ಡನರಸಿಂಹಪ್ಪರವರ ಹೆಂಡತಿಯ ಹೆಸರು ಅನಂತಮ್ಮ. ಸದರಿ ಚಿಕ್ಕನರಸಿಂಹಪ್ಪರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಚಿಕ್ಕನರಸಿಂಹಪ್ಪರವರ ಹಿರಿಯ ಮಗನ ಹೆಸರು ಉಗ್ರಪ್ಪ ಹಾಗೂ 2 ನೇ ಮಗನ ಹೆಸರು ಗಿಡ್ಡಪ್ಪ. ಸದರಿ ದೊಡ್ಡ ನರಸಿಂಹಪ್ಪರವರು ನನ್ನ ತಂದೆ ಎಂದರೆ ಸರಿ. ದೊಡ್ಡನರಸಿಂಹಪ್ಪ ಮತ್ತು ಚಿಕ್ಕನರಸಿಂಹಪ್ಪರವರ ಮಧ್ಯೆ ವಿಭಾಗಗಳು ಆಗಿರಲಿಲ್ಲ.ನನ್ನ ತಂದೆ, ತಾಯಿ, ಚಿಕ್ಕನರಸಿಂಹಪ್ಪ ಹಾಗೂ ಗಿಡ್ಡಪ್ಪರವರು ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಾತ, ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪರವರೆಲ್ಲರೂ ದ್ವಾರಗಾನಹಳ್ಳಿ ಗ್ರಾಮದವರು ಎಂದರೆ ಸರಿ. ಚಿಕ್ಕನರಸಿಂಹಪ್ಪರವರ ಮಕ್ಕಳಾದ ಉಗ್ರಪ್ಪ ಮತ್ತು ಗಿಡ್ಡಪ್ಪರವರು ದ್ವಾರಗಾನಹಳ್ಳಿ ಗ್ರಾಮದಲ್ಲಿ ಬೇರೆ ಬೇರೆಯಾಗಿ ವಾಸವಿದ್ದಾರೆ. ಸದರಿ ಉಗ್ರಪ್ಪರವರು ತೀರಿಕೊಂಡಿದ್ದಾರೆ ಹಾಗೂ ಗಿಡ್ಡಪ್ಪರವರು ಬದುಕಿದ್ದಾರೆ. ಪುಟ್ಟನರಸಮ್ಮ ಮತ್ತು ಸೋಮಕ್ಕರವರು ಚಿಕ್ಕನರಸಿಂಹಪ್ಪರವರ ಇಬ್ಬರು ಹೆಂಡತಿಯರು. ಸದರಿ ಪುಟ್ಟನರಸಮ್ಮ ಮತ್ತು ಸೋಮಕ್ಕರವರು ತೀರಿಕೊಂಡಿದ್ದಾರೆ. ಉಗ್ರಪ್ಪ ಮತ್ತು ಗಿಡ್ಡಪ್ಪರವರು ಸದರಿ ಪುಟ್ಟನರಸಮ್ಮರವರ ಮಕ್ಕಳು.

ನನ್ನ ತಂದೆ-ತಾಯಿಗೆ ಒಟ್ಟು 5 ಜನ ಮಕ್ಕಳು. ನನ್ನ ತಂದೆ-ತಾಯಿಯ ಮಕ್ಕಳ ಹೆಸರು ನಾರಾಯಣಪ್ಪ, ಗಂಗಾಧರಪ್ಪ, ವಾದಿಯಾದ ರಾಮಚಂದ್ರಪ್ಪ, 1 ನೇ ಪ್ರತಿವಾದಿಯಾದ ಕೃಷ್ಣಪ್ಪ ಹಾಗೂ 2 ನೇ ಪ್ರತಿವಾದಿಯಾದ ನಾನು ಎಂದರೆ ಗೋವಿಂದಪ್ಪ. ಸದರಿ ನಾರಾಯಣಪ್ಪ ಮತ್ತು ಗಂಗಾಧರಪ್ಪರವರು ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿ ನಾರಾಯಣಪ್ಪರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಗಂಗಾಧರಪ್ಪರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಭಾರತೀಯ ಸೇನೆಯಲ್ಲಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ಸೇನೆಯಿಂದ ನಿವೃತ್ತಿ ಹೊಂದಿ ಬೆಂಗಳೂರಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸರಿ.

ದಾವಾ ಆಸ್ತಿಗಳಲ್ಲಿ ತಮಗೂ ಭಾಗ ಬರಬೇಕೆಂದು ವಾದಿಯು ಈ ದಾವೆಯನ್ನು ಹೂಡಿದ್ದಾರೆ. ವಾದಿಯು ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ದ್ವಾರಗಾನಹಳ್ಳಿ ಗ್ರಾಮದಲ್ಲಿರುವ ಆಸ್ತಿಗಳಲಿ ತಮಗೆ ಭಾಗ

ಬೇಡವೆಂದು 1 ನೇ ಪ್ರತಿವಾದಿಯು ದಿನಾಂಕ 12.01.1981 ರಂದು ನೋಂದಾಯಿತ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಕ್ಕುನಿವೃತ್ತಿ ಪತ್ರದ ದೃಢೀಕೃತ ನಕಲನ್ನು ವಾದಿಯು ಈ ದಾವೆಯಲ್ಲಿ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ನಿವೃತ್ತಿ ಪತ್ರದ ಬಗ್ಗೆ ನನಗೆ ಏನೂ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಹೆಂಡತಿ ಹೆಸರು ಗಂಗಮ್ಮ. ನನ್ನ ಹೆಂಡತಿ ತೀರಿಕೊಂಡಿದ್ದಾರೆ. ನನ್ನ ಹೆಂಡತಿ ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ಮರಣ ಪ್ರಮಾಣ ಪತ್ರವನ್ನು ನಾನು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡಿರುವುದಿಲ್ಲ. ನನ್ನ ಹೆಂಡತಿ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡರು. ನನಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ನನ್ನ ತಂದೆಯ ಜೀವಿತಾಕಾಲದಲ್ಲಿ ನಾನು ಮತ್ತು ನನ್ನ ಸಹೋದರರೆಲ್ಲರೂ ಒಟ್ಟಿಗೆ ವಾಸವಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಬುದ್ಧಿ ಬಂದ ಸಮಯದಲ್ಲಿ ನನ್ನ ಸಹೋದರರೆಲ್ಲರೂ ಬೇರೆ ಬೇರೆಯಾಗಿ ವಾಸವಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ನನಗೆ 18 ವರ್ಷ ವಯಸ್ಸು ತುಂಬಿದ ನಂತರ ನನ್ನ ತಂದೆಯವರು ತೀರಿಕೊಂಡರು. ನನ್ನ ತಂದೆ ತೀರಿಕೊಂಡ ನಂತರ ನನ್ನ ಹೆಂಡತಿ ತೀರಿಕೊಂಡರು.

ದಾವಾ ಐಟಂ ನಂ.1 ರ ಒಟ್ಟು ವಿಸ್ತೀರ್ಣ 3 ಎಕರೆ 11 ಗುಂಟೆ ಇರುತ್ತದೆ. ದಾವಾ ಐಟಂ ನಂ.1 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿಯಾಗಿದ್ದ ಕಾರಣ ಅದರಲ್ಲಿ ತಮಗೆ ಭಾಗ ಬೇಡವೆಂದು 1 ನೇ ಪ್ರತಿವಾದಿಯು ದಿನಾಂಕ 12.01.1981 ರಂದು ನನಗೆ ಮತ್ತು ವಾದಿಗೆ 1 ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟರು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಜಮೀನು ಮೊದಲು ಸರ್ಕಾರಕ್ಕೆ ಸೇರಿದ ಆಸ್ತಿಯಾಗಿತ್ತು. ಸರ್ಕಾರದ ಜಮೀನಾದ ದಾವಾ ಐಟಂ ನಂ.1 ನ್ನು ಮಂಜೂರು ಮಾಡಿ ಎಂದು ನಾನು ಅರ್ಜಿಯನ್ನು ಸಲ್ಲಿಸಿದ್ದೆನು. ಸದರಿ ಅರ್ಜಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ಸದರಿ ಅರ್ಜಿಯನ್ನು ಸಲ್ಲಿಸಿದ ಕಾಲದಲ್ಲಿ ನನ್ನ ತಂದೆಯವರು ಹಾಗೂ ನನ್ನ ಹೆಂಡತಿ ಬದುಕಿದ್ದರು. ಸದರಿ ಅರ್ಜಿಯನ್ನು ಸಲ್ಲಿಸಿ ಸುಮಾರು 15 ವರ್ಷಗಳು ಕಳೆದ ನಂತರ ದಾವಾ ಐಟಂ ನಂ.1 ರ ಜಮೀನು ನನಗೆ ಮಂಜೂರಾಯಿತು.ಸದರಿ ಜಮೀನು ಮಂಜೂರಾಗುವ ಕಾಲಕ್ಕೆ ನನ್ನ ಹೆಂಡತಿ ಬದುಕಿರಲಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾರ ಹೆಸರಿಗೆ ಜಮೀನು ಮಂಜೂರಾಗುತ್ತದೆಯೋ ಅವರ ಹೆಸರಿಗೆ ಅದರ ಖಾತೆಯು ಬದಲಾಗುತ್ತದೆ ಎಂದರೆ ಸರಿ.

ನಿಡಿ-4 ರ ಆಧಾರದ ಮೇಲೆಯೇ ನನ್ನ ಹೆಸರಿಗೆ ದಾವಾ ಐಟಂ ನಂ.1 ರ ಖಾತೆ ಮತ್ತು ಪಹಣಿಯು ಬದಲಾಗಿರುತ್ತದೆ ಎಂದರೆ ಸರಿ. ಸರ್ಕಾರದಿಂದ ದಾವಾ ಐಟಂ ನಂ.1 ಮಂಜೂರಾಗುವ ಕಾಲದಲ್ಲಿ ನನ್ನ ಹೆಂಡತಿಯು ಬದುಕಿರಲಿಲ್ಲ ಎಂಬ ವಿಚಾರವನ್ನು ನಾನು ಸರ್ಕಾರಕ್ಕೆ ತಿಳಿಸಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಹೆಂಡತಿಯು ಬದುಕಿದ್ದಾಗ ಸಂಬಂಧಪಟ್ಟ ಕಂದಾಯ ನಿರೀಕ್ಷಕರಿಗೆ ಮಂಜೂರಾತಿಯ ವಿಚಾರವನ್ನು ತಿಳಿಸಿದೆವು ಹಾಗೂ ಅವರು ನನ್ನ ಹೆಂಡತಿ ಮತ್ತು ನನ್ನ ಹೆಸರಿಗೆ ಜಂಟಿಯಾಗಿ ಮಂಜೂರು ಮಾಡಿಕೊಟ್ಟರು ಎಂದು ನುಡಿಯುತ್ತಾರೆ. ನನ್ನ ಹೆಂಡತಿ ತೀರಿಕೊಂಡ ನಂತರ ನನ್ನ ಹೆಂಡತಿಯ ಆಸ್ತಿಗೆ ನಾನು ಮತ್ತು ನನ್ನ 4 ಜನ ಮಕ್ಕಳು ವಾರಸುದಾರರಾಗುತ್ತೇವೆ ಎಂದರೆ ಸರಿ. ನನ್ನ ಹೆಂಡತಿ ತೀರಿಕೊಂಡ ನಂತರ ನಾನು ಮತ್ತು ನನ್ನ 4 ಮಕ್ಕಳು ವಾರಸುದಾರರು ಎಂದು ಯಾವುದೇ ಕಂದಾಯ ದಾಖಲೆಯಲ್ಲಿ ನಮೂದು ಆಗಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು